Kannada Prabha • Daily • Monday • 25.11.2019 • Volume 53 • Issue 325 • Pages 12+4 • Price ₹6

# ಬೆಂಗಳೂರು ಎನ್‌ಸಿಸಿ ಕೆಡೆಟ್ ಜತೆ ಪ್ರಧಾನಿ ಮೋದಿ ಸಂವಾದ

ನವದೆಹಲಿ: 'ಮನ್ ಕೀ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಬೆಂಗಳೂರಿನ ಜಿ.ವಿ. ಹರಿ ಎಂಬ ಎನ್‌ಸಿಸಿ ಕೆಡೆಟ್ ಜತೆ ಸಂವಾದ ನಡೆಸಿದರು. 'ನಾನು ಬೆಂಗಳೂರಿನ ಕ್ರಿಸ್ತ ಜಯಂತಿ ಕಾಲೇಜಿನ ವಿದ್ಯಾರ್ಥಿ. ಎನ್‌ಸಿಸಿಯಲ್ಲಿ ಸೀನಿಯರ್ ಅಂಡರ್ ಆಫೀಸರ್ ಆಗಿದ್ದೇನೆ. ನಾನು ಇತ್ತೀಚೆಗೆ ಯುವ ವಿನಿಮಯ ಕಾರ್ಯಕ್ರಮದ ಅಂಗವಾಗಿ ಸಿಂಗಾಪುರಕ್ಕೆ ಹೋಗಿ ಬಂದೆ. ಅಲ್ಲಿ ನಮಗೆ ಸೇನಾ ಕಾರ್ಯಾಚರಣೆ ಹಾಗೂ ಯುದ್ಧ ಕಲೆಗಳ ಬಗ್ಗೆ ತರಬೇತಿ ನೀಡಲಾಯಿತು. ಜಲಸಾಹಸವನ್ನೂ ಕಲಿತೆ. ಅಲ್ಲಿ ನಡೆದ ವಾಟರ್ ಪೋಲೋ ಸ್ಪರ್ಧೆಯಲ್ಲಿ ಭಾರತ ಗೆದ್ದಿತು' ಎಂದು ಹರಿ ಹೇಳಿದರು. ಇದಕ್ಕೆ ಮೋದಿ ಅವರು ಹರಿ ಅವರನ್ನು ಅಭಿನಂದಿಸಿ 'ಇದು ಗ್ರೇಟ್' ಎಂದು ಶಹಬ್ಬಾಸ್‌ಗಿರಿ ನೀಡಿದರು.

# ಗೂಗಲ್‌ನಿಂದ ನನ್ನ ಓದು ಕಮ್ಮಿ ಆಗಿದೆ

'ನನಗೆ ಟೀವಿ ಹಾಗೂ ಸಿನಿಮಾ ನೋಡುವ ಆಸಕ್ತಿ ಕಮ್ಮಿ. ನಾನು ಪುಸ್ತಕ ತುಂಬಾ ಓದುತ್ತಿದ್ದೆ. ಆದರೆ ಇಂದು ಓದುವುದು ಸಾಧ್ಯವಾಗುತ್ತಿಲ್ಲ. ಗೂಗಲ್‌ನಿಂದಲೂ ನನ್ನ ಓದು ಕಮ್ಮಿ ಆಗಿದೆ. ಏಕೆಂದರೆ ಯಾವುದಾದರೂ ವಿಷಯದ ಬಗ್ಗೆ ಅರಿಯಬೇಕು ಎಂದಾದಲ್ಲಿ 'ಶಾರ್ಟ್‌ಕಟ್' ವಿಧಾನವಾದ ಗೂಗಲ್ ಮೊರೆ ಹೋಗಲಾಗುತ್ತದೆ. ಹೀಗಾಗಿ ಎಲ್ಲರಂತೆ ನನ್ನ ಕೆಲವು ಹವ್ಯಾಸಗಳೂ ಮರೆಯಾಗಿವೆ' ಎಂದು ಮೋದಿ ಅನುಭವ ವಿವರಿಸಿದರು.